ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕು ಎಂದರೆ ಶಿಕಾರಿಪುರ ತಾಲ್ಲೂಕು. ನಾನು ಇವ್ಯೆ ಕೂಡ ಎಲ್ಲಾ ಅಧಿಕಾರಿಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಏನಾದರೂ ಹಣವನ್ನು ಬಿಡುಗಡೆ ಮಾಡುತ್ತೀರ ಎಂದು ಕೇಳಿದ್ದೇನೆ ಇಲ್ಲ ಸ್ವಾಮಿ ಎಂದು ಹೇಳುತ್ತಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಹೊಸದಾಗಿ ಬರಗಾಲ ಕಾಮಗಾರಿಗಳನ್ನು ಪ್ರಾರಂಭ ಮಾಡುವುದು ಬೇಡ. ಅದನ್ನು ಜನರೇ ತೀರ್ಮಾನ ಮಾಡಲಿ. ಕೊನೆಯ ಪಕ್ಷ ಸರಕಾರದ ಆದೇಶದ ಪ್ರಕಾರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸಭೆ ಮಾಡಿ ಕೆಲಸವನ್ನು ಅರ್ಧವಾದುದನ್ನು ಮುಂದುವರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಬೇಕು. ಹಾಗೆ ದುಡ್ಡನ್ನು ಕೊಡದಿದ್ದರೆ ಜನರು ಬೀದಿಪಾಲಾಗುತ್ತರೆ, ತುಂಬಾ ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆ. ನಾನು ಹೊಸದಾಗಿ ಕೆಲಸ ಮಾಡುವುದಕ್ಕೆ ಒತ್ತಾಯವನ್ನು ತರುತ್ತಾ ಇಲ್ಲ, ಮಾಡಿರುವ ಕೆಲಸ ಯಾವುದು ಅರ್ಧಕ್ಕೆ ನಿಂತಿದೆ ಅದಕ್ಕಾದರೂ ಹಣವನ್ನು ಕೊಡುವುದಕ್ಕೆ ಸರಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ತಿಳಿಯ ಬಯಸುತ್ತೇನೆ. ಅದುದರಿಂದ ಸಂಬಂಧಪಟ್ಟ ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ಹೇಳಿ ಮತ್ತು ಹಣ ಬಿಡುಗಡೆ ಮಾಡಲು ಕ್ರಮವನ್ನು ಕೂಡ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಈ ಬಗ್ಗೆ ರಕ್ಷಣೆ ಕೋರಿ ವಿನಂತಿಸಿಕೊಳ್ಳುತ್ತೇನೆ.

3) ಕೊಪ್ಪಳವನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ದಿವಟರ್: ಮಾನ್ಯ ಅಧ್ಯಕ್ಷರೆ, ಕಳೆದ 26 ದಿವಸಗಳಿಂದ ಕೊಪ್ಪಳವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಹೇಳಿ, ಅಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆದಿದೆ.

ಅಧ್ಯಕ್ಷರು: ಮಾನ್ಯ ಕೊಪ್ಪಳದ ಸದಸ್ಯರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಆ ಬಗ್ಗೆ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ದಿವಟರ್: ಅಲ್ಲಿ ಸತ್ಯಾಗ್ರಹ ನಡೆದಿದೆ..

ಅಧ್ಯಕ್ಷರು: ಸತ್ಯಾಗ್ರಹವನ್ನು ಮುಗಿಸಲು ನೀವು ಒಂದು ಕರೆ ಕೊಡಿ. ಈಗ ಯಾವ ಜಿಲ್ಲೆಯನ್ನೂ ಹೊಸದಾಗಿ ಮಾಡುವುದಿಲ್ಲವಂತೆ ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ದಿವಟರ್: ಅವರುಗಳು ನನ್ನ ಮಾತನ್ನು ಈ ಸಾರಿ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಸರಕಾರದವರು ಅವರಿಗೆ ಏನಾದರೂ ಹೇಳ ಬೇಕು. ಒಂದು ಉತ್ತರವನ್ನು ಅವರಿಗೆ ಕೊಡಬೇಕು.

ಅಧ್ಯಕ್ಷರು: ಸರಕಾರದವರು ಹೇಳುವುದು ಇನ್ನೂ ಏನೂ ಆ ಬಗ್ಗೆ ಉಳಿದಿಲ್ಲ. ಸರಕಾರದವರು ಉತ್ತರವನ್ನು ಹೇಳಿ ಆಗಿದೆ.

ಶ್ರೀ ಮಲ್ಲಿಕಾರ್ಜುನ ದಿವಟರ್: ಗಡ್ಡೀಗೌಡರ ಕಮಿಟಿಯಲ್ಲಿ ಕೊಪ್ಪಳವನ್ನು ಜಿಲ್ಲೆ ಮಾಡಬೇಕೆಂದು ಇದೆ. ಆ ವರದಿಯನ್ನು ನಾವು ಜಾರಿ ಮಾಡುತ್ತೇವೆ,ಉಳಿದ ಜಿಲ್ಲೆಗಳನ್ನು ಹೊಸದಾಗಿ ಮಾಡುವಾಗ ಕೊಪ್ಪಳವನ್ನು ಕೂಡ ಮಾಡುತ್ತೇವೆ ಎಂದು ಹೇಳ ಬೇಕು.

ಅಧ್ಯಕ್ಷರು: ಇಲ್ಲ, ನಾನು ಅವರ ಪರವಾಗಿ ಹೇಳುತ್ತೇನೆ, ಇದನ್ನೆಲ್ಲಾ ಕೂಲಂಕಷವಾಗಿ ಸರಕಾರದವರು ಪರಿಶೀಲನೆ ಮಾಡುತ್ತಾರೆ. ಹೀಗೆ ಅವರಿಗೆ ಹೇಳಿ, ಸತ್ಯಾಗ್ರಹವನ್ನು ನಿಲ್ಲಿಸಲಿಕ್ಕೆ ತಾವುಗಳು ಹೇಳಿ.

ಶ್ರೀ ಮಲ್ಲಿಕಾರ್ಜುನ ದಿವಟರ್: ಕೊಪ್ಪಳವನ್ನು ಗದಗ್‌ಗೆ ಸೇರಿಸುತ್ತಾರೆ, ಕೊಪ್ಪಳ ಜಿಲ್ಲೆಯಾಗಿ ಮಾಡುವುದನ್ನು ಕೈಬಿಡುತ್ತಾರೆ ಎಂಬ ಸಂಶಯ ನನ್ನ ಜನರಿಗೆ ಬಂದಿದೆ. ಅಲ್ಲಿ ಎರಡನೆಯ ಹಂತದ ಹೋರಾಟ ಪ್ರಾರಂಭವಾಗಿದೆ. ಕರ ನಿರಾಕರಣೆ ಮಾಡಬೇಕು

ಮತ್ತು ಮುಂದಿನ ಲೋಕಸಭೆ ಚುನಾವಣೆಯನ್ನು ಬಹಿಷ್ಕಾರ ಮಾಡುವ ವಿಚಾರದಲ್ಲಿ ಕೂಡ ಇದ್ದಾರೆ, ಅಲ್ಲಿ ಪರಿಸ್ಥಿತಿಯು ಬಹಳ ಗಂಬೀರ ಇದೆ. ಆದ್ದರಿಂದ ಸರಕಾರ ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು: ಹಾಗಾದರೆ ಸರಕಾರದವರು ಏನೆಂದು ಹೇಳಿಕೆಯನ್ನು ಕೊಡಬೇಕು?

ಶ್ರೀ ಮಲ್ಲಿಕಾರ್ಜುನ ದಿವಟರ್: ಮುಂದೆ ಜಿಲ್ಲೆಗಳನ್ನು ಪುರರ್ ರಚಿಸುವಾಗ ಕೊಪ್ಪಳ ಜಿಲ್ಲೆಯನ್ನು ಮಾಡುತ್ತೇವೆ ಎಂದು ಹೇಳ ಬೇಕು. ಮೊದಲ ಕಂತಿನಲ್ಲಿಯೇ ಮಾಡಬೇಕು.

4) ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಔಷದಿಯ ಕೊರತೆ.

ಶ್ರೀ ರುಕ್ಮಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೆ, ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಮೆಡಿಸಿನ್‌ನ ಕೊರತೆಯ ಬಗ್ಗೆ ತುಂಬಾ ದೂರು ಬರುತ್ತಾ ಇದೆ. ನಮ್ಮ ಹಳ್ಳಿಗಳಿಂದ ಅಲ್ಲಿಗೆ ಹೋಗತಕ್ಕಂಥ ಪಾಪದ ಜನರು ಅಲ್ಲಿಗೆ ಹೋಗಿ ಉಪಚಾರಕ್ಕೆ ಹೋದಾಗ ಅಲ್ಲಿಯ ಡಾಕ್ಟರು ಅವರಿಗೆ ಸುಮಾರು 100-200 ರೂಪಾಯಿಗಳ ಔಷಧಿಗೆ ಚೀಟಿ ಬರೆದುಕೊಡುತ್ತಾರೆ. ಬಡವರು ಹೋಗಿ ಎಲ್ಲಿಂದ ಈ ಹಣವನ್ನು ತರುವುದು? ಮತ್ತು ಅಲ್ಲಿರತಕ್ಕಂಥ ಮೆಶಿನ್ಸ್ ಕೂಡ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಇನ್ನೂ ಅನೇಕ ದೂರುಗಳು ಬರುತ್ತಾ ಇವೆ. ಆ ಬಗ್ಗೆ ಸುಕ್ತ ತನಿಖೆಯನ್ನು ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ತಮ್ಮಲ್ಲಿ ನನ್ನ ಒಂದು ಅರಿಕೆ ಇದೆ. ನಾನು 4-3-91ಕ್ಕೆ ಒಂದು ವಿಚಾರವನ್ನು ಗಮನ ಸೆಳೆಯುವ ಸೂಚನೆಯ ಮೂಲಕ ತೆಗೆದುಕೊಳ್ಳಬೇಕೆಂದು ಕಳುಹಿಸಿದ್ದೆ. 22 ದಿವಸಗಳು ಆಯಿತು. ಇದುವರಿಗೆ ಅದು ಬಂದಿಲ್ಲ, ದಯಮಾಡಿ ಅದು ಉಂಟೋ ಇಲ್ಲವೋ ಎಂಬುದನ್ನಾದರೂ ತಾವುಗಳು ಹೇಳ ಬೇಕು. ಇಲ್ಲವಾದರೆ ನನಗೆ ದಯಮಾಡಿ ಅವಕಾಶ ಕೊಟ್ಟರೆ ಅದನ್ನು ನಾನು ಹೇಳುತ್ತೇನೆ ಮಾನ್ಯ ಗೃಹಸಚಿವರೂ ಇದ್ದಾರೆ ಏನಾದರೂ ಉತ್ತರವನ್ನು ಹೇಳುವುದಾದರೆ ಹೇಳಬಹುದು. ಅನುಮತಿ ಕೊಟ್ಟರೆ ಹೇಳುತ್ತೇನೆ, ಬಹಳ ಪ್ರಯತ್ನಪಟ್ಟೆ ನಿಮಗೆ ಖಾಸಗಿಯಾಗಿಯೂ ಹೇಳಿದ್ದೇನೆ. ಹೇಳದಿದ್ದರೆ ನನ್ನ ಕರ್ತವ್ಯಲೋಪ ಮಾಡಿದಹಾಗೆ ಆಗುತ್ತದೆ. ತಾವುಗಳು ಅವಕಾಶ ಕೊಟ್ಟರೆ ನನ್ನ ಕರ್ತವ್ಯವನ್ನು ಪೂರೈಸುವುದಕ್ಕೆ ಆಗುತ್ತದೆ.

5) ರಾಜ್ಯದ ವಿವಿಧ ಬಾಗಗಳಲ್ಲಿ ಕುಡಿಯುವ ನೀರಿನ ಅಭಾವ

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ಟೌನ್ ಮತ್ತು ಕಳಸ ಹೋಬಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ. ಪಿ.ಡಬ್ಲ್ಯೂ.ಡಿ ಟ್ಯಾಂಕರ್‌ನಲ್ಲಿ ಪ್ರತಿನಿತ್ಯ ನೀರನ್ನು ಒದಗಿಸುವ ವ್ಯವಸ್ಥೆ ಇದೆ. ನಾನು ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ನಿಯಮ 334ರ ಮೇಲೆ ನೋಟೀಸ್ ಹಾಕಿದ್ದೆ. ಆದರೆ ಅದು ಇವೊತ್ತ ಬಂದಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿದ್ದಾರೆ. ಅಲ್ಲಿ 29ರಂದು ಮುಖ್ಯಮಂತ್ರಿಯವರ ಕಾರ್ಯಕ್ರಮವಿದೆ. ಅವರು ಕೊಡದಲ್ಲಿ ನೀರನ್ನು ತೆಗೆದುಕೊಂಡು ಹೋದರೆ ಅದು ಸರಿಯಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು ಅದನ್ನು ನಿವಾರಣೆ ಮಾಡಲು ಏನಾದರೂ ಕ್ರಮಕೈಗೊಳ್ಳುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಸದ್ಯಸಿಣಿಯವರಾದ ಮೋಟಮ್ಮನವರ ಮಾತನ್ನು ಕೇಳಿದ್ದೇನೆ. ಅವರು ಕೇಳಿದ್ದನ್ನೆಲ್ಲ ಮಂಜೂರು ಮಾಡಲಿಕ್ಕೆ ಆದೇಶ ಕೊಟ್ಟಿದ್ದೇನೆ. ಅವರ ಕೆಲಸವನ್ನು ಮಾಡುವುದನ್ನೆಲ್ಲಾ ಮಾಡಿದ್ದೇನೆ.